# ಅಗಸನ ಕತ್ತೆ ತಹಸೀಲ್ದಾರನಾದ ಕಥೆ!



■ ಗೌರಿ

**ಹೆಸರು:** ಗಧೇಡೊ
**ನಿರ್ದೇಶನ/ನಿರ್ಮಾಣ:** ಜೈ ಶರ್ಮಾ
**ತಾರಾಗಣ:** ಚಂದನ್ ರಾಯ್ ಸನ್ಯಾಲ್, ವಿಕ್ರಾಂತ್ ಮೆಸ್ಸಿ, ಆಕಾಶ್ ದಬಾಡೆ, ಕಿಶನ್ ಬೆನ್ವಾಲ್, ತೃಪ್ತಿ ಕಾಮ್ಕರ್
**ಛಾಯಾಗ್ರಹಣ:** ಸಚಿನ್ ಮತ್ತು ಪಿಳ್ಳೈ
**ಧ್ವನಿ ವಿನ್ಯಾಸ:** ಉದಿತ್ ದುಸೇಜಾ



ಕಾಮಿಡಿ ಸಿನಿಮಾಗಳನ್ನು ಮಾಡುವುದು ಸುಲಭ. ಆದರೆ ವಿಡಂಬನೆಯ ದಾರಿ ಹಿಡಿದು ಯಶಸ್ವಿಯಾಗುವುದು ಕಷ್ಟ. ಅದೊಂದು ಬಗೆಯಲ್ಲಿ ಕಾರ್ಟೂನ್ ಇದ್ದ ಹಾಗೆ. ಇದ್ದ ಹಾಗೇ ಚಿತ್ರಿಸಿದರೆ ಅದು ಕಾರ್ಟೂನಲ್ಲ. ಇರುವುದನ್ನು ಕೊಂಚ ಅತಿರೇಕಿಸಿ ಆ ಅತಿರೇಕದ ಮೂಲಕವೇ ಆ ವ್ಯಕ್ತಿಯ ಚಹರೆಯನ್ನೂ ಇರಿಸುವ ಸವಾಲು ಕಾರ್ಟೂನಿಸ್ಟ್‌ನದ್ದು. ಆದರೆ ಇಷ್ಟೇ ಮಾಡಿಬಿಟ್ಟರೆ ಅದು ಕೌಶಲವಾಗಿಯಷ್ಟೇ ಉಳಿಯುತ್ತದೆ. ಅದರಾಚೆಗೆ ಏನನ್ನೂ ಹೊಳೆಯಿಸುವುದಿಲ್ಲ. ಅತಿರೇಕದ ರೇಖೆಗಳು ವ್ಯಕ್ತಿಯ ಗುರ್ತನ್ನು ಹೇಳುತ್ತಲೇ ಇನ್ನೇನನ್ನೂ ಚುಚ್ಚುವ, ಪಕ್ಕನೆ ಹೊಳೆಯಿಸುವ, ಕಿಸಕ್ಕನೆ ನಗೆಯುಕ್ಕಿಸುವ ಹತ್ಯಾರಗಳೂ ಆಗಬೇಕು. ಆಗ ಮಾತ್ರ ವ್ಯಂಗ್ಯಚಿತ್ರ ಸಾರ್ಥಕಗೊಳ್ಳುವುದು. ಈ ಮೂರೂ ದಾರಿಗಳು ಸಂಧಿಸುವ ಬಿಂದುವಿನಲ್ಲಿ ಸೃಜನಶೀಲ ಕೃತಿ ರಚಿಸುವುದು ನಿಜಕ್ಕೂ ಕಷ್ಟದ ಕೆಲಸ. ಹಾಗಾಗಿಯೇ ನೆನಪಿಡುವಂಥ ವ್ಯಂಗ್ಯಚಿತ್ರಕಾರರು ಎಷ್ಟು ವಿರಳವೋ ವಿಡಂಬನೆಯ ದಾರಿ ಹಿಡಿದ ಯಶಸ್ವಿಯಾದ ಸಿನಿಮಾಗಳೂ ಅಷ್ಟೇ ವಿರಳ.

ಇಲ್ಲಿ ವ್ಯಂಗ್ಯಚಿತ್ರ ಉದಾಹರಣೆ ಬಳಸಿಕೊಳ್ಳಲೂ ಒಂದು ಕಾರಣವಿದೆ. ಈಗ ನಾವು ಚರ್ಚಿಸಲು ಹೊರಟಿರುವ ಕಿರುಚಿತ್ರ 'ಗಧೇಡೊ'ನಲ್ಲಿ ವ್ಯಂಗ್ಯಚಿತ್ರದಲ್ಲಿ ಕಾಣುವ ಕೆಲವು ಗುಣಲಕ್ಷಣಗಳಿವೆ. ತನ್ನ 'ಕಾರ್ಟೂನಿಸ್ಟ್ ಗುಣ'ದಿಂದಲೇ ಅದು ಗಮನಸೆಳೆಯುತ್ತದೆ. ಈ ಗುಣ ಇರುವುದು ಬರೀ ಕಥೆಯಲ್ಲಲ್ಲ, ಪಾತ್ರ ಚಿತ್ರಣದಲ್ಲಲ್ಲ, ನಟನೆಯಲ್ಲಲ್ಲ ಈ ಮೂರರಲ್ಲಿಯೂ ಇದೆ!

ವಾಸ್ತವಕ್ಕಿಂತ ಎರಡು ಇಂಚು ಮೇಲಿನ ಅತಿರೇಕದ ಭೂಮಿಕೆಯಲ್ಲಿ ಈ ಕಿರುಚಿತ್ರ ಘಟಿಸುತ್ತದೆ. ಅದೊಂದು ಶಾಲೆ, ಅದರ ಹೆಸರು 'ರಾಜಕೀಯ ಉಚ್ಚ ಮಹಾವಿದ್ಯಾಲಯ'. ಅಲ್ಲಿನ ಕೊಠಡಿಯಲ್ಲಿ ಬೆಂಚುಗಳಿಲ್ಲ. ಜಮಖಾನೆಗಳಿವೆ. ಅದರ ಮೇಲೆ ಒಬ್ಬ ಮಲಗಿ ಗೊರಕೆ ಹೊಡೆಯುತ್ತಿದ್ದಾನೆ. ಬೋರ್ಡಿನ ಮೇಲೆ ಒಬ್ಬ ಮಾಸ್ತರ ಇಂಗ್ಲಿಷ್ ಪದಗಳನ್ನು ಬರೆಯುತ್ತ ಕಲಿಸುತ್ತಿದ್ದಾನೆ. ಅದೂ ತಪ್ಪು ತಪ್ಪು ಇಂಗ್ಲೀಷು. ಆ ಬೋರ್ಡಿನ ಪಕ್ಕದಲ್ಲಿ ಒಬ್ಬ ಹುಡುಗ ಬಾಗಿ ನಿಂತಿದ್ದಾನೆ. ಅವನ ಸೊಂಟದ ಮೇಲೆ ಡಸ್ಟರ್ ಇದೆ. ಹೀಗೆ ವಿಚಿತ್ರವಾಗಿ ಆರಂಭವಾಗುವ ಕಿರುಚಿತ್ರ ಹೊರಳಿಕೊಳ್ಳುವುದು ಇನ್ನಷ್ಟು ವಿಚಿತ್ರ ಮಗ್ಗುಲಿಗೇ.

ಶಾಲೆಯಲ್ಲಿ ಕಲಿಸುವ ಅರೆಬರೆ ಕಲಿತ ಮಾಸ್ತರನನ್ನು ಕಂಡರೆ ಅನಕ್ಷರಸ್ಥ ಊರವರಿಗೆಲ್ಲ ಭಯ. ಆ ಮಾಸ್ತರನಿಗೋ ಮಹಾ ಜಂಭ. 'ಈ ಅನಾಗರಿಕ ಕತ್ತೆಗಳಿಗೆ ಇಂಗ್ಲಿಷು ಕಲಿಸಿ ಮನುಷ್ಯರನ್ನಾಗಿ ಮಾಡುತ್ತಿದ್ದೇನೆ' ಎಂಬ ಅಹಂಕಾರ. ಊರ ಅಗಸನ ಮುಂದೆ ಹೀಗೊಮ್ಮೆ ಹೇಳಿಯೂ ಬಿಡುತ್ತಾನೆ. ತಕ್ಷಣವೇ ಆ ಅಗಸ ತನ್ನ ಕತ್ತೆಯನ್ನು ತಂದು ಕೊಟ್ಟು 'ಇದನ್ನು ಮನುಷ್ಯನನ್ನಾಗಿ ಮಾಡು' ಎಂದು ಫೀಸನ್ನೂ ಕೊಟ್ಟುಬಿಡುತ್ತಾನೆ! ಹಣದ ಆಸೆಗೆ ಅದನ್ನು ತೆಗೆದುಕೊಂಡು ಹೋಗುವ ಮಾಸ್ತರ ಆ ಕತ್ತೆಯನ್ನ ಇನ್ನಷ್ಟು ದುಡ್ಡಿಗೆ ಬೇರೊಬ್ಬನಿಗೆ ಮಾರಿಬಿಡುತ್ತಾನೆ.

ಅಗಸ ದಿನದಿನವೂ 'ಕತ್ತೆ ಮನುಷ್ಯನಾಯಿತೇ?' ಎಂದು ಕೇಳಲಾರಂಭಿಸುತ್ತಾನೆ. ಅವನ ಕಾಟ ತಾಳಲಾರದೆ ಮಾಸ್ತರ ಒಂದು ದಿನ, 'ಆಗಿದೆ. ಶಹರದಲ್ಲಿ ತಹಸೀಲ್ದಾರನಾಗಿದೆ' ಎಂದು ಹೇಳಿಬಿಡುತ್ತಾನೆ. ತಕೋ, ಅಗಸನಿಗೆ ಎಲ್ಲಿಲ್ಲದ ಖುಷಿ. ಕುಣಿದಾಡುತ್ತಲೇ ಹೆಂಡತಿಯ ಜೊತೆಗೆ ಶಹರದ ತಹಸೀಲ್ದಾರ ಕಚೇರಿಗೆ ಹೋಗುತ್ತಾನೆ. ಅಲ್ಲಿ ತಹಸೀಲ್ದಾರನನ್ನು ಕಂಡು ಗಂಡ ಹೆಂಡತಿ ಇಬ್ಬರೂ ಅವನು ತನ್ನ ಕತ್ತೆಯೇ ಎಂದು ಭಾವಿಸಿಕೊಂಡು ಮೇವು ಹಾಕಿ, ಕತ್ತಿಗೆ ಕಟ್ಟುವ ಹಗ್ಗ ಹಿಡಿದುಕೊಂಡು ಕರೆಯಲಾರಂಭಿಸುತ್ತಾನೆ. ತಹಸೀಲ್ದಾರ ಕೋಪದಲ್ಲಿ ಅವರಿಬ್ಬರಿಗೂ ಒದೆಯುತ್ತಾನೆ. ಗಂಡ ಹೆಂಡತಿ ಇಬ್ಬರೂ 'ಕತ್ತೆ ಮನುಷ್ಯನಾಗಿರುವುದೇನೋ ನಿಜ. ಆದರೆ ತನ್ನ ಮೂಲಗುಣ ಒದೆಯುವುದು ಮಾತ್ರ ಹೋಗಿಲ್ಲ' ಎಂದು ಬೇಜಾರಿನಿಂದ ಹೊರಡುತ್ತಾರೆ.

ಕೇಳಲೇ ಸೊಗಸೆನಿಸುವ ಈ ಕತೆಯನ್ನು ನೋಡಲೂ ಸೊಗಸಾಗುವ ಹಾಗೆ ಕಟ್ಟಿದ್ದಾರೆ ನಿರ್ದೇಶಕ ಜೈ ಶರ್ಮಾ. ಅಗಸನ ಮುಗ್ಧತೆ, ಮಾಸ್ತರನ ಹುಸಿ ಬೌದ್ಧಿಕತೆ, ತಹಸೀಲ್ದಾರನ ಕ್ರೌರ್ಯ ಎಲ್ಲವನ್ನೂ ಇಂದಿನ ನಮ್ಮ ವ್ಯವಸ್ಥೆಯ ಡಾಂಭಿಕತೆಯನ್ನು ವಿಡಂಬನೆ ಮಾಡಲು ಸಶಕ್ತವಾಗಿ ಬಳಸಿಕೊಂಡಿದ್ದಾರೆ. ಛಾಯಾಗ್ರಹಣದಲ್ಲಿಯೂ ಕಾರ್ಟೂನಿಸ್ಟ್ ಗುಣವನ್ನು ಸಮರ್ಥವಾಗಿ ಕೆತ್ತಿರುವುದು ವಿಶೇಷ. ಮೇಲ್ನೋಟಕ್ಕೆ ಸಾಧಾರಣ ನಗೆಯುಕ್ಕಿಸುವ ಕಥೆಯಾಗಿ ಕಾಣುವ ಈ ಹದಿನಾರು ನಿಮಿಷದ ಕಿರುಚಿತ್ರಕ್ಕೆ ನಮ್ಮ ಇಂದಿನ ವ್ಯವಸ್ಥೆಯ ಕೋರೆಗಳನ್ನು ಕಾಣಿಸುವ ಪದರಗಳಿರುವುದಂತೂ ದಿಟ.

ಸಿನಿಮಾ ನೋಡಲು ಕೊಂಡಿ: bit.ly/3awkysQ